Regd No M 1299 34 th Year ಕಾಲ 3—8—51

SATYAVADI



ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಪಾಕಿಸ್ತಾನ ಜೆಹಾದ್ ಕೂಗಾಟಕ್ಕೆ

ಮುಸ್ಲಿಂರ ಖಂಡನೆ

ಪಶ್ಚಿಮ ಬಂಗಾಳಾ ಮುಸ್ಲಿಂ ಸಮ್ಮೇಳನದ ಅಡ್‌ಹಾಕ್ ಕಮಿಟಿಯವರು 'ಪಾಕಿಸ್ಥಾನದಲ್ಲಿನ ಅವಲೀಲೆ ಜೆಹಾದ್ ಕೂಗಾಟ' ವನ್ನು ಖಂಡಿಸಿರುವರು; ಮತ್ತು ನೆಹರು ಸರಕಾರಕ್ಕೆ ಮಾತೃಭೂಮಿ ರಕ್ಷಣೆಗಾಗಿ ಸಕಲ ಸಹಾಯವನ್ನೀಡಿ ಸಕಲ ತ್ಯಾಗಮಾಡಲು ಸಿದ್ಧರಿರುವದಾಗಿ ತಿಳಿಸಿದ್ದಾರೆ.

— ಲಾಹೋರಿನಲ್ಲಿ ವಜ್ರಮುಷ್ಠಿ ಸಂಘ ಉದ್ಘಾಟಿಸಲ್ಪಟ್ಟಿತು.

— ಕಾಶ್ಮೀರ ಕಲಹವನ್ನು ಕೊನೆಗಾಣಿಸಲು ಬರ್ಮಾ ಪ್ರಧಾನಿ ಥಾಕಿನ್‌ರು ಇಂಡೋನೇಷಿಯಾ ಪ್ರಧಾನಿಗೆ ಪತ್ರ ಬರೆದು ತಾವಿಬ್ಬರೂ ಕಾಯುಕ್ತರಾಗಿ ಪ್ರಯತ್ನಿಸೋಣವೆಂದು ತಿಳಿಸಿರುವದಾಗಿ ರಂಗೂನ್ ವಾರ್ತೆ.

— ಅಜಿತ್‌ಪ್ರಸಾದ ಜೈನ್ ಭಾರತ ಸಚಿವ ಮಂಡಲಕ್ಕೆ ರಾಜೀನಾಮೆ ಕೊಟ್ಟಿಲ್ಲ.

ಗಾಂಧಿ ಹೆಸರು ಸೇರಿಸಕೂಡದು

ಮಹಾತ್ಮ ಗಾಂಧಿಯವರ ಹೆಸರನ್ನು ವ್ಯಾಪಾರ ಗುರುತುಗಳಿಗೆ ಉಪಯೋಗಿಸಕೂಡದೆಂದು ಭಾರತ ಸರ್ಕಾರಿ ಪ್ರಕಟಣೆ.

ಅಕ್ಟೋಬರಿನಲ್ಲಿ ಬಟ್ಟೆ ಬೆಲೆ ಇಳಿಯುವುದು !

ಮುಂದಿನ ಅಕ್ಟೋಬರಿನಲ್ಲಿ ಹಸನಾದ ಬಟ್ಟೆ ಬೆಲೆ ಇಳಿವುದೆಂದು ಮುದರಾಸು ವಾರ್ತೆ.

ಜಂಪಾನರೇಸುಗಳು

ಈ ತಿಂಗಳು 5-12-19-26 ರಲ್ಲಿ ಬೆಂಗಳೂರು ಜಂಪಾನರೇಸು ಜರುಗುವುದು.

ಆಡಳಿತವು ಯಶಸ್ವಿಯಾಗಬೇಕಾದರೆ ಅನ್ಯೋನ್ಯತೆಯು ಸಮೃದ್ಧಿಯಾಗಿರಬೇಕು. — ಅನನ್.

ಸಿನಿಮಾ ನೋಡುವುದರಲ್ಲಿ ಅಪೂರ್ವ ದಾಖಲೆ

ಕಳೆದ 10 ವರ್ಷಗಳಲ್ಲಿ ಎಡಬಿಡದೆ ಪ್ರತೀ ದಿನ ರಾತ್ರಿ [ರವಿವಾರ ಕೂಡ ಬಿಡದೆ] ಲಿಂಕನ್‌ಷೈರಿನಲ್ಲಿಯ ಒಂದು ಸಿನಿಮಾದಲ್ಲಿ ಸಿನಿಮಾ ಪ್ರದರ್ಶನಗಳಿಗೆ ಹಾಜರಾಂತೆ ಅಪೂರ್ವ ದಾಖಲೆ ಓರ್ವ ೪೭ ವರ್ಷ ಪ್ರಾಯದ ವೃದ್ಧನೋರ್ವನಿಗೆ ಸಲುತ್ತದೆ; ಈಗ ಆ ಸಿನೀಮಾ ಮಂದೀರದವರು ಆ ಮುದುಕನಿಗೆ ಅವನ ಜೀವನದ ಶೇಷಾಯುಷ್ಯ ಕಾಲದಲ್ಲಿ ಟಿಕೀಟುಪಡೆಯದೆ ಉಚಿತವಾಗಿ ಸಿನೀಮಾ ನೋಡುವ ಸಲವತ್ತು ಇತ್ತಿದ್ದಾರೆ

೫೦ ವರ್ಷಗಳ ಮೇಲೆ ಜಗತ್ತಿನ ಸ್ವರೂಪ

ಇನ್ನು ೫೦ ವರ್ಷಗಳೊಳಗೆ ಎಂದರೆ ೨೦೫೦ ರೊಳಗೆ ಚಂದ್ರಲೋಕಕ್ಕೆ ಮಂಗಳ ಮತ್ತು ಚಂದ್ರಗ್ರಹಗಳಿಗೆ ರೊಕೆಟ್ ಪ್ರಯಾಣಗಳು ಬಳಕೆಗೆ ಬಾರದಿರಲಾರವು : ಯಂತ್ರಗಳನ್ನೂ, ಹಡಗುಗಳನ್ನೂ, ವಿಮಾನಗಳನ್ನೂ ಮತ್ತು ರೊಕೆಟ್-ಗಳನ್ನೂ ನಡೆಸಲು ಅಟಣ್ಣಿಕ್ಯ ಶಕ್ತಿಯನ್ನು ಉಪಯೋಗಿಸುವರು : ಭೂಮಿಯು ಮೇಲಿನ ಹವಾಗುಣವನ್ನು ಅಭಿವೃದ್ಧಿಗೊಳಿಸಲು ಕೃತಿಕ ಸೂರ್ಯರ ನಿರ್ಮಾಣವಾಗುವುದು ; ನೇರವಾಗಿ ಗಾಳಿ. ನೀರು ಮತ್ತು ಸೂರ್ಯ ಪ್ರಕಾಶದಿಂದ ಆಹಾರಹೊಂದುವ ಸಾಧನಗಳೂ ಕಂಡು ಹಿಡಿಯಲ್ಪಡುವವು — ಆ ಅಭಿಪ್ರಾಯಗಳಿಂದೊಡಗೂಡಿದ 'ಫಾರ್ಮರ್ಡ್ ಏ ಸೆಂಚುರಿ' ಎಂಬ ಚಿತ್ರವು ಐದು ಮಂದಿ ಬ್ರಿಟೀಷು ವಿಜ್ಞಾನ ವಿಶಾರದರಿಂದ ಲಿಖಿತವಾಗಿ ತಯಾರಾಗಿರುತ್ತದೆ.

ಸುದ್ದಿಗಳು

ಮೈಸೂರು ಮಂಡಿ ಮೊಹಲ್ಲ ದಿನಾಚರಣೆ ನಿನ್ನೆ ವೈಭವದಿಂದ ನೆರವೇರಿತು. ಮೈಸೂರು ಪೌರಸಭೆ ಮಾನ್ಯ ಅಧ್ಯಕ್ಷರು, ಕಮಿಷನರೂ ಸದಸ್ಯರು ಮುಂತಾದವರು ಭಾಗವಹಿಸಿದ್ದರು.

ಡಾ|| ಬಿ. ಜಿ. ದಾಸ್ ಮುಂತಾದವರ ನೇತೃತ್ವದಲ್ಲಿ ಮೈಸೂರು ಲ್ಯಾಂಡ್ಸ್ ಡೆವೆಲಪ್‌ಮೆಂಟ್ ಬಿಲ್ಡಿಂಗ್ಸ್ ಮಳಿಗೆಗಳ ವರ್ತಕರು ಸಚಿವರಾದ ಶ್ರೀಗಳಾದ ದಾಸಪ್ಪ ಚನ್ನಿಗರಾಮಯ್ಯ ಇವರನ್ನು ಸಂದರ್ಶಿಸಿ ಮತೊಂದು ಮಾಹಿತಿಯಾಳಗಾಗಿ ಮಳಿಗೆಗಳನ್ನು ಖಾಲಿ ಮಾಡಿ ಹಂಗಾಮಿಯಾಗಿ ಪುಷ್ಪಭವನ ಮೈದಾನದಲ್ಲಿ ಮಳಿಗೆಗಳನ್ನು ಕಟ್ಟಿಕೊಳ್ಳುವ ತೀರ್ಮಾನಕ್ಕೆ ಬಂದಿದ್ದಾರೆ.

ಕರೀಂಗಂಜದಲ್ಲಿ ಅಲೋಕಚಂದ್ರದೇವ ಎಂಬವನು ತನ್ನ 125 ಮಯಿಸ್ಸಿನಲ್ಲಿ ಸತ್ತನು

ಭಾರತ ಮುಸ್ಲಿಮರು ಪಾಕಿಸ್ತಾನ ಪಕ್ಷದವರಲ್ಲವೆಂದು ಬೊಂಬಾಯಿ ಪರೀಫರಾದ ರಹಮತ್ ಉಲ್ಲಾ ತಿಳಿಸಿರುವರು.

1954 ನೇ ವರ್ಷದಿಂದ ಭಾರತದಲ್ಲಿ ಬರಿಗಾಲಿನಿಂದ ಫುಟ್‌ಬಾಲ್ ಆಡುವುದನ್ನು ಪೂರ್ಣ ನಿಲ್ಲಿಸಬೇಕೆಂದು ಅಖಿಲ ಭಾರತ ಫುಟ್‌ಬಾಲ್ ಮಹಾ ಮಂಡಲ ನಿರ್ಧರಿಸಿರುವದಾಗಿ ಕಲ್ಕತ್ತಾ ವರದಿ.

ಈ ತಿಂಗಳು 6 ನೇ ತಾ|| ನಿಂದ ಆರಂಭವಾಗುವ ಪಾರ್ಲಿಮೆಂಟಿನಲ್ಲಿ ಸರಕಾರಿ ನೌಕರರ ಪಾಸಗಿ ಆಸ್ತಿ ಸಂಪತ್ತುಗಳ ಮೇಲೆ ಸರ್ಕಾರ ಕಾಲಕಾಲಕ್ಕೆ ತಪಾಸಣೆ ನಡೆಸುವ ಬಗ್ಗೆ ನಿಯಮಗಳನ್ನು ಸಿದ್ಧಗೊಳಿಸಬೇಕೆಂಬ ನಿರ್ಣಯವನ್ನು ತಂದಿರುವದಾಗಿ ದೆಹಲಿ ವಾರ್ತೆ.

ಬೆಂಗಳೂರು ಕಬ್ಬನ್ ಪಾರ್ಕ್ ಅಗ್ನಿ ಅನಾಹುತದಲ್ಲಿ ನೊಂದವರಿಗೆ ಸಹಾಯ ಮಾಡಲು ಹಾಸನ ಪೌರಸಭೆ ನಿರ್ಧರಿಸಿದೆ.

ಗೌತಂ ಹೇಳಿಕೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಂ ಇತ್ತ ಹೇಳಿಕೆಯಲ್ಲಿ ಭಾಷಾವಾರು ಪ್ರಾಂತ್ಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವದು ಶೀಘ್ರದಲ್ಲೇ ಅತ್ಯಗತ್ಯ ಎಂದಿರುವರು.

ರಿಯಾಯಿತಿ ಕೇಳಿಕೆ

ಮೈಸೂರಿನ ನಾನಾಸ್ಥಾನದ ಇಂಜಿನಿಯರಿಂಗ್ ಡಿಪ್ಲೊಮಾ ವಿದ್ಯಾರ್ಥಿಗಳು ಮೊನ್ನೆ ಸಭೆ ಮಾಡಿ ಸಂಬಂಧಪಟ್ಟವರಲ್ಲಿ ರಿಯಾಯಿತಿ ಕೋರುವ ನಿರ್ಣಯಕ್ಕೆ ಬಂದಿದ್ದಾರೆ

ರಾಜೀನಾಮೆ ಅಂಗೀಕೃತ

ಭಾರತ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಶ್ರೀ ರಫಿ ಅಹಮದ್ ಕಿದ್‌ವಾಯಿ ಅರ್ಪಿಸಿದ ರಾಜೀನಾಮೆಯನ್ನು ಒಪ್ಪಿಕೊಂಡರು ಕಿದ್ವಾಯಿ ಪ್ರಕಟಣೆ ಮಾಡಿದ ಹೇಳಿಕೆಯಲ್ಲಿ ಪಂ|| ನೆಹರು ಅವರಿಗೆ ಅಡಚಣೆಯಾಗಿ ಅವರ ಧ್ಯೇಯಕ್ಕೂ ತಮ್ಮ ಬೆಂಬಲ ಉಂಟೆಂದು ತಿಳಿಸಿದ್ದಾರೆ. ಅವರು ಪುನಃ ಕಾಂಗ್ರೆಸಿಗೆ ಸೇರುವದಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ತಾಯಿಯನ್ನು ಕೊಂದ

ಕಾರವಾರದ ಸಿದ್ದಾಪುರದ ಕುಂಡ್ಲಿ ಕೊಪ್ಪದಲ್ಲಿ ಈರ ಎಂಬವನು ತನ್ನ ತಾಯಿ ತಿಮ್ಮಿ ಎಂಬವಳನ್ನು ಮೊನ್ನೆ ಮೊನ್ನೆ ಕೊಂದಿದ್ದಾನೆ.

ಮೂಕರ ನಿರ್ಣಯ

ಜಮ್ಮುವಿನಲ್ಲಿ ಜನಮಾವಣೆ ಆಗಿದ್ದ ಮೂಕರ ಸಭೆ ಕಾಶ್ಮೀರ ಭಾರತದಲ್ಲಿಯೆ ಉಳಿಯಬೇಕೆಂದು ನಿರ್ಧರಿಸಿದ್ದಾರೆ.

ಭಾರತದ ಸುಪ್ರಸಿದ್ಧ ನಟ ಅಶೋಕ ಕುಮಾರ್ ಮತ್ತು ಅಭಿನೇತ್ರಿ ನಳಿನಿ ಜಯವಂತರು ಕೈರೋವಿಗೆ ತೆರಳಿದರು. ಅವರು ಈಗ ತಯಾರಿಕೆಯಲ್ಲಿರುವ ಹೊಸ ಹಿಂದಿ ಚಿತ್ರದ ಕೆಲವು ದೃಶ್ಯಗಳನ್ನು ತೆಗೆದುಕೊಳ್ಳುವುದಕ್ಕಾಗಿ ಅಲ್ಲಿಗೆ ತೆರಳಿದರೆಂದು ಬೊಂಬಾಯಿ ವಾರ್ತೆ.

ಲಂಡನ್ನಿನಲ್ಲಿರುವ ಭಾರತ ಹೈಕಮಿಷನರು ಪತ್ರಿಕೆಯವರಿಗೆ ಮೊನ್ನೆ ತಿಳಿಸಿದುದರಲ್ಲಿ ಭಾರತಕ್ಕೆ ಪಾಕಿಸ್ತಾನ ಅಥವ ಮತ್ತಾವ ರಾಜ್ಯವನ್ನು ಆಕ್ರಮಿಸುವ ಉದ್ದೇಶ ಇಲ್ಲವೆಂದರು.

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೃಷ್ಣ ಮೂರ್ತಿಪುರಂ ಶಾಖೆಯಲ್ಲಿ ತಾ || 28-7-51 ನೇ ಶನಿವಾರ ಸಂಜೆ ಶ್ರೀಮಜ್ಜ ಮಹಾರಾಜರವರ 33ನೇ ವರ್ಧಂತ್ಯುತ್ಸವವನ್ನು ಶ್ರೀಮನ್ಮಹಾರಾಜರವರ ಎ. ಡಿ. ಸಿ ಮತ್ತು ದರ್ಬಾರುಬಕ್ಷಿಯವರಾದ ಸರ್ದಾರ್ ಎಚ್. ಎಲ್. ದೇವರಾಜೇ ಅರಸು ಸವರ ಘನ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು ಪಾರ್ಥನೆಯಾದನಂತರ, ಮಂದಿರದ ವಿದ್ಯಾರ್ಥಿನಿ ಶ್ರೀಮತಿ ಶಾಂತ, ಬಿ. ಎಸ್ಸಿ ರವರು ಮೈಸೂರು ಸಹೋದರರಿಂದ ರಚಿತವಾದ ಸ್ವಾಗತಪದ್ಯವನ್ನು ಹಾಡಿದ್ದರು. ರಾ | ಜ || ರಾ | ಸೇ | ಪ್ರ | ಶ್ರೀ ಎಂ. ರಾಮಸ್ವಾಮಿಯವರಿಂದ ಸ್ವಾಗತ ಭಾಷಣವಾದಮೇಲೆ, ಮೈಸೂರು ಸಹೋದರರು ಸ್ವಯಂ ತೆಲುಗು, ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ರಚಿಸಿದ್ದ ಕೃತಿಗಳು ಮತ್ತು ಮಹಾರಾಜರ ವಿಷಯವಾಗಿ ರಚಿಸಿದ್ದ, ತಿಲ್ಲಾನ, ಇವುಗಳ ಸಂಗೀತ ಕಚೇರಿಯನ್ನು ವಿದ್ವಾನ್ ಎಂ. ಎಸ್. ರಾಮಯ್ಯನವರ ಮೃದಂಗ, ವಿದ್ವಾನ್ ವಿಶ್ವೇಶ್ವರರವರ ವೀಣೆ, ಪಕ್ಕವಾದ್ಯಗಳೊಡನೆ ನಡೆಸಿದರು.

ನಂತರ ಈ ಸಮಾರಂಭಕ್ಕೆ ದಯಮಾಡಿದ್ದ ಸಂಗೀತಶಾಸ್ತ್ರಾರತ್ನ ಕೆ ವಾಸುದೇವಾಚಾರ್ಯರು ಭಾಷಣಮಾಡಿ ಪ್ರಭುಗಳ ಗುಣಾತಿಶಯಗಳನ್ನು ಕೊಂಡಾಡಿ, ರಾಜಕುಟುಂಬಕ್ಕೆಲ್ಲಾ ಶ್ರೇಯಸ್ಸನ್ನು ಕೋರಿದರು ಮೈಸೂರು ಸಹೋದರರ ಸಂಗೀತವನ್ನು ಪ್ರಶಂಸಿಸುತ್ತಾ, ಅವರ ಸಂಗೀತದಲ್ಲಿ ಶ್ರುತಿ ಗತಿ, ಮುತ್ತಿ, ಶಾಸ್ತ್ರ ಸಂಪ್ರದಾಯಗಳು ಬಹಳ ಚೆನ್ನಾಗಿ ಪೋಷಣೆಯಾಗಿ, ಶ್ರೇಷ್ಠ ಮಟ್ಟದಲ್ಲಿರುವುದೆಂದೂ, ಅವರು ತ್ರಿಭಾಷೆಗಳಲ್ಲಿಯೂ ಸ್ವರಜತಿ, ವರ್ಣ, ಕೃತಿ, ಪಲ್ಲವಿ ತಿಲ್ಲಾನ, ದೇವರನಾಮಗಳನ್ನು ರಚಿಸಿರುವುದು ಅವರು ದೈವಿಕವಾದ ಶಕ್ತಿ ಮತ್ತು ಕಟ್ಟಾಕ್ಷಗಳಿಗೆ ಪಾತ್ರರಾಗಿಸುವುದನ್ನೂ ಸೂಚಿಸುವುದೆಂದೂ, ಕೇವಲ ಚಿಕ್ಕ ವಯಸ್ಸಿನವರಾದರೂ ದೇಶ ಮತ್ತು ಕಲಾಸೇವೆಯನ್ನು ಇಷ್ಟು ಯಶಸ್ವಿಯಾಗಿ ತಮ್ಮ ಮಂದಿರಗಳ ಮುಖಾಂತರ ಮಾಡುತ್ತಿರುವುದು ಬಹಳ ಪ್ರಶಂಸನೀಯ ವೆಂದೂ ತಿಳಿಸಿ ಮಂದಿರಕ್ಕೂ ಸಹೋದರರಿಗೂ ಶ್ರೇಯಸ್ಸನ್ನು ಕೋರಿದರು. ಮಂಗಳಾರತಿಯಾದ ನಂತರ ಅಧ್ಯಕ್ಷರು ಭಾಷಣ ಮಾಡುತ್ತಾ, ಶ್ರೀಮನ್ಮಹಾರಾಜರವರು ರಾಜಸ್ಥಿಗಳೆಂದೂ ತಿಳಿಸಿ ಅವರಲ್ಲಿರುವ ಗುಣಾತಿಶಯಗಳು, ಪಾರಮಾರ್ಥಿಕ ಮಹತ್ವ ಮತ್ತು ಶಾಸ್ತ್ರಜ್ಞಾನ ಇವುಗಳನ್ನು ಕೊಂಡಾಡಿದರು ಮೈಸೂರು ಸಹೋದರು ಬಹಳ ಮತ್ತು ಕಲಾಸೇವೆಯನ್ನು ಬಹಳವಾಗಿ ಪ್ರಶಂಸಿಬುತ್ತಾ ಮೈಸೂರು ಸಹೋದರು ಪ್ರತಿಫಲಾಕ್ಷೆ ಇಲ್ಲದೆ ನಿಸ್ವಾರ್ಥವಾಗಿದ್ದು, ಇನ್ನಷ್ಟು ಇಂದಲೂ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವರೆಂದೂ ಅವರು ಈ ಚಿಕ್ಕ ವಯಸ್ಸಿನಲ್ಲೇ ಶಾಸ್ತ್ರೀಯವಾದ, ಸುಪ್ರದಾಯದ ಮೇಲ್ಕಟ್ಟಿದ ಪಂಡಿತಪಾಮರರಂಜಕವಾದ ಸಂಗೀತದಲ್ಲಿ ವಿದ್ವಾಂಸರಾಗಿರುವುದು ಮಾತ್ರವಲ್ಲದೆ ತ್ರಿಭಾಷೆಗಳಲ್ಲಿಯ ಈ ಕೀರ್ತನೆ, ತಿಲ್ಲಾನ ಇತ್ಯಾದಿಗಳನ್ನು ರಚಿಸಿ ಶ್ರೇಷ್ಠ ತಂಹದ ವಾಗ್ಗೇಯಕಾರರಾಗಿರುವರೆಂದೂ, ಭಗವಂತನ ಅನುಗ್ರಹಕ್ಕೂ ಅವರಿಗೂ ಚಿರಕಾಲ ಸಕಲ ಸನ್ಮಂಗಳಗಳನ್ನು ಕೊಟ್ಟ ಕಾವಾಡಲೆಂದೂ ಹಾರೈಸಿದರು.

ನೃತ್ಯಕಲಾಮಂದಿರದ ಶ್ರೀ ಕೆ. ಎಸ್. ರಾಜಗೋಪಾಲ್ ಮತ್ತು ಶಿಷ್ಯ ವರ್ಗದವರಿಂದ ನೃತ್ಯವಾದನಂತರ ಶ್ರೀ ಆರ್. ಚಂದ್ರಶೇಖರಯ್ಯನವರು ವಂದನಾರ್ಪಣೆ ಮಾಡುತ್ತಾ, ಅಧ್ಯಕ್ಷರಾದ ಸರ್ದಾರ್ ಎಚ್. ಎಲ್ ದೇವರಾಜೆ ಅರಸುನವರು ಉನ್ನತವಾದ ಅಧಿಕಾರದಲ್ಲಿದ್ದು ಅಗರ್ಭ ಶ್ರೀಮಂತರಾಗಿ, ಸಕಲ ಭೋಗಗಳನ್ನು ಅನುಭವಿಸಲು ಅನುಕೂಲವಿದ್ದಾಗ್ಯೂ, ಅವುಗಳನ್ನೆಲ್ಲಾ ದೂರೀಕರಿಸಿ, ಪಾರಮಾರ್ಥಿಕ ಸಾಧನೆಯನ್ನು ಮಾಡಿರುವುದು ಬಹಳ ಆದರ್ಶನೀಯವಾಗಿದೆಯೆಂದೂ, ಅನೇಕ ಅನಾನುಕೂಲತೆಗಳಿದ್ದಾಗ್ಯೂ ಮಂದಿರದ ಮೇಲೆಯೂ ಕಲೆಯ ಮೇಲೆಯೂ ಅಭಿಮಾನವಿಟ್ಟು ದಯಮಾಡಿ ಆಶೀರ್ವದಿಸಿದ್ದಕ್ಕಾಗಿ ಅಧ್ಯಕ್ಷರನ್ನು, ಸಕಲ ವಿಧದಲ್ಲಿ ನೆರವಿತ್ತ ಎಲ್ಲರನ್ನೂ ಕೃತಜ್ಞತಾಪೂರ್ವಕವಾಗಿ ವಂದಿಸಿದರು ಮಹಾರಾಜರು ಶ್ರೇಯಸ್ಸಾರ್ಥನೆಯ ನಿರ್ಣಯದ ಅಂಗೀಕಾರ ಸಹಿ ಹಂಚಿಕೆಯೊಡನೆ ಸಮಾರಂಭವು ಮಂಗಳವಾಯಿತು.

Edited, Printed and Published by M. S. Krishna Rao, at the Satyavadi Press Chamrajpuram Mysore

ಉಡ್‌ಲಾಂಡ್
ಶಿ ನ್ಮ
— 5 ನೇ ವಾರ —
Nagina
ನಗೀನಾ
— ವಾತ್ಸ —
ನೂತನ, ನಾಸಿಂ ಖಾನ್, ಗೋವಿಂ
ನಗೀನಾ ಚಿತ್ರದೊಂದಿಗೆ
ಹಜ್ ಅಥವ ಮೆಕ್ಕಾಯಾತ್ರೆ
ಚಿತ್ರವು ಪ್ರದರ್ಶಿಸಲಾಗುತ್ತೆ.

ರಣಜಿತ್
3—8—51 ರಿಂದ
ಸರೋಜಿನ ಚಟರ್ಜಿ, ಪ್ರೇಮ್ ಅದಿಬ್
ಕಕ್ಕೂ ನಟಿಸಿರುವ
ಹೃದಯಂಗಮ ಹಿಂದಿ ಚಿತ್ರ
ಪ್ರೀತ್ ಕ ಗೀತ್
Preet ka Geet

= OPERA =
Aug. 2nd
Pygmy Island
Starring —
Johnny Weissmuller,
Ann Savage, David Bruce.
— Next —
Secrets Of
Life

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾತ್ತಾಶ್ರಯದಲ್ಲಿ ಪ್ರಕಟವಾಗುವ
- ಪ್ರಬೋಧ -
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

"ಗೋರಕ್ಷಣೆ"
ಕಾರ್ಯ ಎಲ್ಲೆಲ್ಲೂ ನಡೆಯಲಿ
Protect the Cow

ಐ. ಟಿ. ಎಲ್. ಗ್ರೈಪ್ ಸಿರಪ್
ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾಹಿನಿ
— ತಯಾರಕರು —
ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟಿಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠ ಶಿಶು ಆರೋಗ್ಯದ ಗುರುತು
ITL ಗ್ರೈಪ್ ಸಿರಪ್